

# ನಾಗಣ್ಣನ ಬುತ್ತಿ ಸೇವೆ

■ ಸುದೇಶ ದೊಡ್ಡಪಾಳ್ಯ
ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.



ಸಣಕಲು ದೇಹದ ನಾಗಣ್ಣ ದುರ್ಗದ್ ಒಂದೇ ಏಟಿಗೆ ಸೈಕಲ್ ಸ್ಟ್ಯಾಂಡ್ ಹಾಕಿದರು. ಹ್ಯಾಂಡಲ್‌ಗೆ ನೇತುಹಾಕಿದ ಬ್ಯಾಗ್‌ನಿಂದ ಹಾಲಿನ ಬಾಟಲನ್ನು ತೆಗೆದುಕೊಂಡು ದಾಪುಗಾಲು ಹಾಕುತ್ತಾ ಮನೆಯೊಳಕ್ಕೆ ಹೋದರು. ನಾಗಣ್ಣರನ್ನು ನೋಡುತ್ತಿದ್ದಂತೆಯೇ ಮನೆಯೊಡತಿ ಭರ್ತಿ ಬಾಟಲನ್ನು ತೆಗೆದುಕೊಂಡು ಖಾಲಿ ಬಾಟಲು ಕೊಟ್ಟರು.

ಸೈಕಲ್ ಅಲ್ಲಿಂದ ಮತ್ತೊಂದು ಕಾಲೊನಿಯತ್ತ ಹೊರಟಿತು. ಅಲ್ಲಿ ಎರಡು ಅಂತಸ್ತಿನ ಮಹಡಿ ಮನೆ ಮುಂದೆ ನಿಂತಿತು. ನಾಗಣ್ಣರ ಕೈ ಮತ್ತೆ ಬ್ಯಾಗಿಗೆ ಸರಕ್ಕನೆ ಹೋಯಿತು. ಬುತ್ತಿಯನ್ನು ತೆಗೆದುಕೊಂಡು ಮೆಟ್ಟಿಲುಗಳನ್ನು ಒಂದೇ ಉಸಿರಿಗೆ ಏರಿದರು. ಅಲ್ಲಿ ವಿದ್ಯಾರ್ಥಿಯೊಬ್ಬ ತನ್ನ ಕೊಠಡಿಯ ಬಾಗಿಲು ಬಳಿಯೇ ನಿಂತಿದ್ದನು. ನಾಗಣ್ಣರಿಂದ ಬುತ್ತಿ ತೆಗೆದುಕೊಂಡು ಖಾಲಿ ಡಬ್ಬಿಯನ್ನು ಕೊಟ್ಟನು.

ನಾಗಣ್ಣನವರ ಬರುವಿಕೆಯನ್ನು ವೈದ್ಯಕೀಯ, ಎಂಜಿನಿಯರಿಂಗ್, ಐಟಿಐ, ಹಾಗೂ ಇನ್ನಿತರೆ ಕೋರ್ಸ್ ಕಲಿಯುತ್ತಿರುವ ಹುಡುಗರು, ಆಸ್ಪತ್ರೆಯಲ್ಲಿ ಕೆಲಸ ಮಾಡುವವರು ಸೇರಿದಂತೆ ಕಲಬುರ್ಗಿಯ ವಿವಿಧ ಕಾಲೊನಿ, ಬಡಾವಣೆಯ 25 ಮಂದಿ ಪ್ರತಿದಿನ ಎದುರು ನೋಡುತ್ತಿರುತ್ತಾರೆ.

ನಾಗಣ್ಣ ಕಲಬುರ್ಗಿ ಜಿಲ್ಲೆ ಆಳಂದ ಪಟ್ಟಣದ ನೇಕಾರ ಕಾಲೊನಿಯ ನಿವಾಸಿ. ಇವರು 39 ಕಿಲೋಮೀಟರ್ ದೂರವಿರುವ ಕಲಬುರ್ಗಿಗೆ ಕಳೆದ 30 ವರ್ಷಗಳಿಂದ ಪ್ರತಿನಿತ್ಯ ರೊಟ್ಟಿ ಬುತ್ತಿಗಳು ಮತ್ತು ಹಾಲಿನ ಬಾಟಲುಗಳನ್ನು ತಂದುಕೊಡುತ್ತಿದ್ದಾರೆ.

**ಬುತ್ತಿ ಸೇವೆ ಪರಿಕಲ್ಪನೆ**

ಆಳಂದ ಪಟ್ಟಣದ ಸಿರಿವಂತ ಮನೆತನದ ಐದಾರು ಮಂದಿ ಕಲಬುರ್ಗಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಖಾನಾವಳಿ, ಹೋಟೆಲ್‌ಗಳ ಊಟ ರುಚಿಸುತ್ತಿರಲಿಲ್ಲ. ಹಾಗಾಗಿ ಮನೆಯಿಂದ ಪ್ರತಿನಿತ್ಯ ರೊಟ್ಟಿ ಬುತ್ತಿಯನ್ನು ತಂದುಕೊಡಲು ನಾಗಣ್ಣನವರ ದೊಡ್ಡಮ್ಮನ ಮಗನನ್ನು ನೇಮಿಸಿಕೊಂಡಿದ್ದರು. ಆತ ಐದೂ ಮಂದಿಯ ಮನೆಗಳಿಗೆ ಹೋಗಿ ಬುತ್ತಿಯನ್ನು ಸಂಗ್ರಹಿಸಿಕೊಂಡು ಕಲಬುರ್ಗಿಗೆ ಬರುತ್ತಿದ್ದನು. ಆತನಿಗೆ ತಿಂಗಳಿಗೆ ತಲಾ 40 ರೂಪಾಯಿ ಕೊಡುತ್ತಿದ್ದರು. ಬಳಿಕ ಸರ್ಕಾರಿ ನೌಕರಿ ಸಿಕ್ಕಿದ್ದರಿಂದ 1983ರಲ್ಲಿ ಆತ ನಾಗಣ್ಣನವರಿಗೆ ಈ ಕಾಯಕವನ್ನು ವಹಿಸಿಕೊಟ್ಟನು. ಅಂದು ಆರಂಭಿಸಿದ ಬುತ್ತಿ ಸೇವೆ ಇಂದಿಗೂ ನಿಂತಿಲ್ಲ.

'ಹಿಂದೆ ಹೆಚ್ಚು ಬಸ್ಸುಗಳು ಇರಲಿಲ್ಲ. ಟ್ರಕ್ ಹಿಡಿದು ಕಲಬುರ್ಗಿಗೆ ಬರುತ್ತಿದ್ದೆ. ಎಷ್ಟೋ ದಿನ ಮಧ್ಯಾಹ್ನದ ಬುತ್ತಿಯನ್ನು ಸಂಜೆ ಮುಟ್ಟಿಸುತ್ತಿದ್ದೆ' ಎಂದು ನಾಗಣ್ಣ ಹಳೆಯ ದಿನಗಳನ್ನು ಮೆಲುಕು ಹಾಕುತ್ತಾರೆ.

ನಾಗಣ್ಣನವರಿಂದ ಬುತ್ತಿ ತರಿಸಿಕೊಳ್ಳುತ್ತಿದ್ದ ಐದೂ ಮಂದಿಯೂ ಕೆಲವೇ ವರ್ಷಗಳಲ್ಲಿ ಕಲಬುರ್ಗಿಯಲ್ಲಿ ಮನೆ ಮಾಡಿದರು. ಆಗ ಬುತ್ತಿ ಸೇವೆಗೆ ಸಂಚಕಾರ ಬಂದಿತು. ಇಷ್ಟರಲ್ಲಿ ನಾಗಣ್ಣ ಬುತ್ತಿ ಸೇವೆಗೆ ಒಗ್ಗಿಕೊಂಡುಬಿಟ್ಟಿದ್ದರು. ತಾವೇ ಅಲೆದಾಡಿ ಕಲಬುರ್ಗಿಯಲ್ಲಿ ಕಾಲೇಜು ಕಲಿಯುತ್ತಿರುವ ತಮ್ಮೂರಿನ ಹುಡುಗರನ್ನು ಪತ್ತೆ ಮಾಡಿದರು.

ಬುತ್ತಿ ಸೇವೆ ಕಾಯಕ ಬೆಳಿಗ್ಗೆ 8 ಗಂಟೆಗೆ ಆರಂಭವಾಗುತ್ತದೆ. ಇವರ ಸೈಕಲ್ ಬೆಲ್‌ನ 'ಟ್ರಿಣ್...ಟ್ರಿಣ್...' ಸದ್ದು ಕೇಳುತ್ತಿದ್ದಂತೆಯೇ ರೊಟ್ಟಿ ಬುತ್ತಿ ಕೊಡುವವರು, ಹಾಲಿನ ಬಾಟಲು ಕೊಡುವವರು ಮನೆಯಿಂದ ಹೊರಗೆ ಬರುತ್ತಾರೆ. ನಾಗಣ್ಣ ಮನೆಯಿಂದ ಮನೆಗೆ ಹೋಗುತ್ತಾ ಆಳಂದ ಬಸ್ ನಿಲ್ದಾಣಕ್ಕೆ ಬರುವ ಹೊತ್ತಿಗೆ ನಾಲ್ಕೂ ಬ್ಯಾಗುಗಳು ಭರ್ತಿಯಾಗಿರುತ್ತವೆ.

10 ಗಂಟೆಗೆ ಆಳಂದದಿಂದ ಹೊರಟು 11 ಗಂಟೆ ಹೊತ್ತಿಗೆ ಕಲಬುರ್ಗಿಯ ಆಳಂದ ನಾಕಾಕ್ಕೆ ಬಂದು ಇಳಿಯುತ್ತಾರೆ. ಇಲ್ಲಿ ಪರಿಚಯಸ್ಥರ ಮನೆಯಲ್ಲಿ ಮತ್ತೊಂದು ಸೈಕಲ್ ನಿಲ್ಲಿಸಿರುತ್ತಾರೆ. ಅದನ್ನು ತೆಗೆದುಕೊಂಡು ನಾಗಣ್ಣ ಬುತ್ತಿ ಸೇವೆಗೆ ಹೊರಡುತ್ತಾರೆ.

ಅದು ಉರಿಬಿಸಿಲೇ ಇರಲಿ, ಕೊರೆವ ಚಳಿಯೇ ಇರಲಿ, 'ಧೋ' ಎಂದು ಸುರಿಯುವ ಮಳೆಯೇ ಬರಲಿ– ನಾಗಣ್ಣನ ಬುತ್ತಿ ಸೇವೆ ಮಾತ್ರ ನಿಲ್ಲುವುದೇ ಇಲ್ಲ. ಮಧ್ಯಾಹ್ನ ಒಂದೂವರೆ ಗಂಟೆಯೊಳಗಾಗಿ ಎಲ್ಲರ ಕೈಯಲ್ಲೂ ಬುತ್ತಿ ಇರುವಂತೆ ಮಾಡುತ್ತಾರೆ. ಒಂದೇ ಬುತ್ತಿಯಲ್ಲಿ ಮಧ್ಯಾಹ್ನ ಮತ್ತು ರಾತ್ರಿಯ ಆಹಾರವಿರುತ್ತದೆ.

ಆಳಂದದಲ್ಲಿ ಬುತ್ತಿಗಳನ್ನು ಸಂಗ್ರಹಿಸಲು ನಾಗಣ್ಣ 6 ಕಿಲೋಮೀಟರ್ ಸುತ್ತಲೇಬೇಕು. ಅವುಗಳನ್ನು ಕಲಬುರ್ಗಿಯಲ್ಲಿ ಎಲ್ಲರಿಗೂ ತಲುಪಿಸಲು 15 ಕಿಲೋಮೀಟರ್ ಸೈಕಲ್ ತುಳಿಯಬೇಕು. ಬುತ್ತಿ ಸೇವೆಯನ್ನು ಮುಗಿಸಿ ಮನೆ ಸೇರುವ ಹೊತ್ತಿಗೆ ಸೂರ್ಯ ಪಶ್ಚಿಮದಲ್ಲಿರುತ್ತಾನೆ.

'ನನಗೀಗ ನಲವತ್ತೊಂಬತ್ತು ವರ್ಷ. ಮಂಡಿ ನೋವು ಕಾಣಿಸಿಕೊಂಡಿದೆ. ಐದಾರು ವರ್ಷಗಳಿಂದ ಭಾನುವಾರ ರಜೆ ಮಾಡುತ್ತಿದ್ದೇನೆ. ಆರೋಗ್ಯ ಕೆಟ್ಟಾಗ ಹೊರತು ಪಡಿಸಿದರೆ ಯಾವತ್ತೂ ಬುತ್ತಿ ಕೊಡುವುದನ್ನು ತಪ್ಪಿಸಿಯೇ ಇಲ್ಲ' ಎಂದು ನಾಗಣ್ಣ ಹೆಮ್ಮೆಯಿಂದಲೇ ಹೇಳುತ್ತಾರೆ.

ನಾಗಣ್ಣನವರಿಗೆ ಪತ್ನಿ, ಮೂವರು ಪುತ್ರಿಯರು ಇದ್ದಾರೆ. ಪತ್ನಿ ನೇಯ್ಗೆ ಮುಂದುವರೆಸಿದ್ದಾರೆ. ಸರ್ಕಾರ ಮನೆಯನ್ನು ಕೊಟ್ಟಿದೆ. ಇಷ್ಟನ್ನು ಬಿಟ್ಟರೆ ನಾಗಣ್ಣನವರಿಗೆ ಬುತ್ತಿ ಸೇವೆಯಿಂದ ಬರುವುದೇ ದೊಡ್ಡ ಆದಾಯ. ತಮ್ಮ ಬುತ್ತಿ ಸೇವೆಗಾಗಿ ತಲಾ 400 ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ತಿಂಗಳಿಗೆ 10 ಸಾವಿರ ಆದಾಯವಿದೆ. ಬಸ್‌ಪಾಸ್, ಚಹಾ ಇತ್ಯಾದಿಗಳಿಗೆ ಎರಡು ಸಾವಿರ ಖರ್ಚಾಗುತ್ತದೆ.

ಮೂರು ದಶಕಗಳಲ್ಲಿ ನೂರಾರು ಮಂದಿ ಇವರಿಂದ ಬುತ್ತಿ ತರಿಸಿಕೊಂಡು ಉಂಡು ಆರೋಗ್ಯವನ್ನು ಕಾಪಾಡಿಕೊಂಡು ಶಿಕ್ಷಣವನ್ನು ಪೂರೈಸಿದ್ದಾರೆ. ■